ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE : 21/1/21

# ಹೊಸ ಕಾಮಗಾರಿಗೆ ನಿರ್ಬಂಧ

## ಯಡಿಯೂರಪ್ಪ ಪ್ರಕಟಣೆ | ಜಿಲ್ಲಾಡಳಿತಗಳ ಜತೆ ಮುಖ್ಯಮಂತ್ರಿ ಸಭೆ

21-1-2021

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಆರ್ಥಿಕ ಇತಿಮಿತಿಯೊಳಗೆ ತುರ್ತು ಅಗತ್ಯದ ಅಭಿವೃದ್ಧಿ ಕಾಮಗಾರಿಗಳಿಗೆ ಆದ್ಯತೆ. ಇವುಗಳನ್ನು ಹೊರತುಪಡಿಸಿ ಹೊಸದಾಗಿ ಕಟ್ಟಡ ನಿರ್ಮಾಣ ಕಾಮಗಾರಿ ಕೈಗೆತ್ತಿಕೊಳ್ಳುವುದಕ್ಕೆ ನಿರ್ಬಂಧ. ಸಾಮಾಜಿಕ ಭದ್ರತಾ ಯೋಜನೆಯಡಿ ವಿವಿಧ ಮಾಸಾಶನಗಳಿಗೆ ಆಧಾರ್ ಸಂಯೋಜನೆ ಬಳಿಕ ಶೇ.20 ಬೋಗಸ್ ಫಲಾನುಭವಿಗಳ ಪತ್ತೆ. ಅರ್ಹ ಫಲಾನುಭವಿಗಳ ಪತ್ತೆಗೆ ಸಮೀಕ್ಷೆ ಹಾಗೂ ವರದಿ ಸಲ್ಲಿಕೆಗೆ ತಿಂಗಳ ಗಡುವು. ಪ್ರಧಾನ ಮಂತ್ರಿಗಳ ಬೀದಿಬದಿ ವ್ಯಾಪಾರಿಗಳ ಆತ್ಮನಿರ್ಭರ್ ನಿಧಿ ಯೋಜನೆ ಅನುಷ್ಠಾನ ಅಸಮರ್ಪಕ. ಈ ಹಿನ್ನೆಲೆಯಲ್ಲಿ ರಾಜ್ಯಮಟ್ಟದ ಬ್ಯಾಂಕರುಗಳ ಸಮಿತಿ ಸಭೆ ಕರೆದು ಚರ್ಚಿಸಿ ಸ್ಪಷ್ಟ ನಿರ್ದೇಶನ ನೀಡಲು ತೀರ್ಮಾನ...

**» ಅರ್ಹ ಮಾಸಾಶನ ಫಲಾನುಭವಿಗಳ ಪತ್ತೆಗೆ ಸಮೀಕ್ಷೆ**

ವಿಧಾನಸೌಧ ಸಮ್ಮೇಳನ ಸಭಾಂಗಣದಲ್ಲಿ ಸಿಎಂ ಬಿ.ಎಸ್.ಯಡಿಯೂರಪ್ಪ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಸಚಿವರು, ಪ್ರಾದೇಶಿಕ ಆಯುಕ್ತರು, ಜಿಲ್ಲಾಧಿಕಾರಿಗಳು ಹಾಗೂ ಜಿಪಂ ಸಿಇಒಗಳ ಸಭೆಯಲ್ಲಿ ತೆಗೆದುಕೊಂಡ ಪ್ರಮುಖ ನಿರ್ಧಾರಗಳಿವು.

ಸಭೆ ಬಳಿಕ ಮಾಧ್ಯಮಗೋಷ್ಠಿಯಲ್ಲಿ ಯಡಿಯೂರಪ್ಪ ಈ ಮಾಹಿತಿ ನೀಡಿದರು. ಬಸವ ಕಲ್ಯಾಣದಲ್ಲಿ ಅನುಭವ ಮಂಟಪ ನಿರ್ಮಾಣಕ್ಕೆ 500 ಕೋಟಿ ರೂ. ಮಂಜೂರು ಮಾಡಿ ಕಾಮಗಾರಿಗೆ ಚಾಲನೆ ನೀಡಿರುವ ಕಾರಣ ನಿರ್ಬಂಧ ಅನ್ವಯಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಅದೇ ರೀತಿ ಚಾಲ್ತಿ ಅಭಿವೃದ್ಧಿ ಕಾಮಗಾರಿ ಹೊರತುಪಡಿಸಿ ಹೊಸದಾಗಿ ಕಟ್ಟಡ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವಂತಿಲ್ಲವೆಂದು ಡಿಸಿ, ಸಿಇಒಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದು, ಗುರುವಾರದ ಸಚಿವ ಸಂಪುಟ ಸಭೆಯಲ್ಲಿ ಈ ಕುರಿತು ಚರ್ಚಿಸಿ ಪ್ರಮುಖ ನಿರ್ಧಾರಕ್ಕೆ ಬರಲಾಗುವುದು ಎಂದರು. ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ, ಸಚಿವರಾದ ಬಸವರಾಜ ಬೊಮ್ಮಾಯಿ, ಆರ್.ಅಶೋಕ್, ಎಸ್.ಟಿ.ಸೋಮಶೇಖರ್, ಕೆ.ಗೋಪಾಲಯ್ಯ, ಡಾ.ಕೆ.ಸುಧಾಕರ್, ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಇನ್ನಿತರ ಅಧಿಕಾರಿಗಳು ಇದ್ದರು.



ವಿಜಯವಾಣಿ

ವಿಧಾನಸೌಧ ಸಮ್ಮೇಳನ ಸಭಾಂಗಣದಲ್ಲಿ ಸಿಎಂ ಬಿ.ಎಸ್. ಯಡಿಯೂರಪ್ಪ ಬುಧವಾರ ಸಚಿವರು, ಪ್ರಾದೇಶಿಕ ಆಯುಕ್ತರು, ಜಿಲ್ಲಾಧಿಕಾರಿಗಳು ಹಾಗೂ ಜಿಪಂ ಸಿಇಒಗಳ ಸಭೆ ನಡೆಸಿದರು.

### ಮುಖ್ಯಾಂಶಗಳು

● ಒಂದೂವರೆ ವರ್ಷದ ಬಳಿಕ ಅಧಿಕಾರಿಗಳ ನೇರ ಸಭೆ, ಎಂಟೂವರೆ ತಾಸು ಗಹನ ಚರ್ಚೆ ● ಕರೊನಾ ಕಾರಣಕ್ಕೆ 10 ತಿಂಗಳು ನಷ್ಟ, ಸ್ಥಗಿತ ಅಭಿವೃದ್ಧಿ ಪ್ರಕ್ರಿಯೆ ಮತ್ತೆ ಚುರುಕು ● ಪ್ರವಾಹ, ಅತಿವೃಷ್ಟಿಯಿಂದ 12.14 ಲಕ್ಷ ಹೆಕ್ಟೇರ್ ಬೆಳೆ ನಷ್ಟ, 12.02 ಲಕ್ಷ ರೈತರ ವಿವರ ನೋಂದಣಿ, 9.22 ಲಕ್ಷ ರೈತರಿಗೆ 709.67 ಕೋಟಿ ರೂ. ಪರಿಹಾರ ಪಾವತಿ ● ಶಾಸಕರ ಪ್ರದೇಶಾಭಿವೃದ್ಧಿ ನಿಧಿಯಡಿ 2 ವರ್ಷ ಮೇಲ್ಪಟ್ಟ ಯೋಜನೆಗಳನ್ನು ಪೂರ್ಣಗೊಳಿಸಿ, ಕ್ರಿಯಾ ಯೋಜನೆಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಪ್ರಕ್ರಿಯೆ ಸರಳಗೊಳಿಸಲು ತೀರ್ಮಾನ ● ಪ್ರತಿ 3 ತಿಂಗಳಿಗೊಮ್ಮೆ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಶಾಸಕರು, ಡಿಸಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ● ಜಿಲ್ಲಾಧಿಕಾರಿಗಳು ಪ್ರತಿ ವಾರಕ್ಕೊಂದು ಹಳ್ಳಿಗೆ ಭೇಟಿ, ತಿಂಗಳಿಗೊಮ್ಮೆ ಕ್ರಮಕೈಗೊಂಡ ಕುರಿತು ಮುಖ್ಯ ಕಾರ್ಯದರ್ಶಿಗಳಿಗೆ ವರದಿ ಸಲ್ಲಿಸುವುದು ಕಡ್ಡಾಯ ● ಕಂದಾಯ ಗ್ರಾಮಗಳಾಗಿ ಪರಿವರ್ತಿಸಲು 2,741 ದಾಖಲೆರಹಿತ ಜನವಸತಿಗಳ ಗುರುತು, 1419 ಗ್ರಾಮಗಳ ಪ್ರಾಥಮಿಕ ಅಧಿಸೂಚನೆ, 803 ಗ್ರಾಮಗಳಿಗೆ ಅಂತಿಮ ಅಧಿಸೂಚನೆ ಪ್ರಕಟ. ಉಳಿದ ಗ್ರಾಮಗಳ ಅಂತಿಮ ಅಧಿಸೂಚನೆಗೆ ಒಂದು ತಿಂಗಳ ಗಡುವು ● 14.18 ಲಕ್ಷ ಎಕರೆ ಸರ್ಕಾರಿ ಜಮೀನಿನ ಪೈಕಿ 2.7 ಲಕ್ಷ ಎಕರೆ ಒತ್ತುವರಿ ತೆರವು. ಉಳಿದ ಒತ್ತುವರಿ ಶೀಘ್ರ ತೆರವಿಗೆ ಕ್ರಮ. ತೆರವಾದ ಜಮೀನಿಗೆ ತಂತಿಬೇಲಿ ಹಾಕಿ ಸಂರಕ್ಷಣೆ. ಬೆಂಗಳೂರಿನಲ್ಲಿ ಕೋಟ್ಯಂತರ ಮೌಲ್ಯದ ಒತ್ತುವರಿ ಜಮೀನು ತೆರವುಗೊಳಿಸಿ ಹರಾಜು ● ಪ್ರತಿ ಜಿಲ್ಲೆಯಲ್ಲಿ ಒತ್ತುವರಿ ತೆರವಿಗೆ ಕೈಗೊಂಡ ಕ್ರಮಗಳು ಪ್ರಾದೇಶಿಕ ಆಯುಕ್ತರಿಂದ ಪರಿಶೀಲನೆ ● ಉದ್ಯೋಗ ಖಾತರಿ ಯೋಜನೆಯಡಿ ಖಾಸಗಿ ಜಮೀನಿನ ಬದಲಿಗೆ ಕೆರೆ, ಕಾಲುವೆಗಳ ಸ್ವಚ್ಛತೆಗೆ ಆದ್ಯತೆ ● ಕಲ್ಯಾಣ ಕರ್ನಾಟಕದಲ್ಲಿ ವೈಯಕ್ತಿಕ ಶೌಚಗೃಹ ನಿರ್ಮಾಣದಲ್ಲಿ ಹೆಚ್ಚಿನ ಪ್ರಗತಿ, ನೀರು ಪೂರೈಕೆ ವ್ಯವಸ್ಥೆ ಖಾತರಿ ● 42,000 ಶಾಲೆಗಳ ಪೈಕಿ 16,000 ಶಾಲೆಗಳಿಗೆ ಕುಡಿಯುವ ನೀರು ಪೂರೈಕೆ ಕಾಮಗಾರಿಗೆ ಕಾರ್ಯಾದೇಶ, ಪೂರ್ಣಗೊಳಿಸಲು ಎರಡು ತಿಂಗಳ ಗಡುವು

### ಕಣ್ಣಿಗೆ ಕಾಣುವ ಸಾಧನೆ

ಕರೊನಾ ಲಸಿಕೆ ಅಭಿಯಾನ, ಕೃಷಿ ಇನ್ಪುಟ್ ಸಬ್ಸಿಡಿ ಪಾವತಿ, ಪ್ರವಾಹಪೀಡಿತರಿಗೆ ವಸತಿ ಸವಲತ್ತು, ಗ್ರಾಮ ಮತ್ತು ನಗರ ಪ್ರದೇಶಗಳಲ್ಲಿ ಘನ ಹಾಗೂ ದ್ರವ ತ್ಯಾಜ್ಯ ವಿಲೇವಾರಿ, ಕುಡಿಯುವ ನೀರು ಹಾಗೂ ಕೇಂದ್ರ ಸರ್ಕಾರದ ಯೋಜನೆಗಳು ಆದ್ಯತಾ ಪಟ್ಟಿಯಲ್ಲಿವೆ. ಆರ್ಥಿಕ ಇತಿಮಿತಿಯೊಳಗೆ ಅಭಿವೃದ್ಧಿ ಕಾಮಗಾರಿಗಳನ್ನು ಚುರುಕುಗೊಳಿಸಿ, ಅನುಷ್ಠಾನದ ಫಲಿತಾಂಶ ಕಣ್ಣಿಗೆ ಕಾಣುವಂತಹ ಸಾಧನೆಯಾಗಿರಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದು ಬಿಎಸ್‌ವೈ ವಿವರಿಸಿದರು.

### ಕೋಟ್ಯಂತರ ರೂ. ಪೋಲು ಬಹಿರಂಗ

ರಾಜ್ಯದಲ್ಲಿ ವಿವಿಧ ಮಾಸಾಶನಗಳಡಿ 67 ಲಕ್ಷ ಫಲಾನುಭವಿಗಳಿಗೆ ವಾರ್ಷಿಕ 7,500 ಕೋಟಿ ರೂ. ಖರ್ಚಾಗುತ್ತಿದೆ. ಆಧಾರ್ ಸಂಖ್ಯೆ ಸಂಯೋಜನೆ ಬಳಿಕ ಸತ್ತವರು ಇತರರಿಗೆ ಪಿಂಚಣಿ, ಪಡಿತರ ವಿತರಣೆಯಾಗುತ್ತಿರುವುದು ಇ-ಜನ್ಮ ಪೋರ್ಟಲ್‌ನಲ್ಲಿ ದಾಖಲಾಗಿದೆ. ಒಟ್ಟು ಶೇ.20 ಬೋಗಸ್ ಫಲಾನುಭವಿಗಳಿಗೆ ಕಳೆದ 3-4 ವರ್ಷಗಳಿಂದ ಹಣ ಸಂದಾಯವಾಗಿದ್ದು, ಕೋಟ್ಯಂತರ ರೂ. ಪೋಲಾಗಿದೆ ಎಂಬ ಬೆಚ್ಚಿ ಬೀಳಿಸುವ ಮಾಹಿತಿಯನ್ನು ಸಿಎಂ ಬಹಿರಂಗಪಡಿಸಿದರು. ಸರ್ಕಾರದ ಬೊಕ್ಕಸಕ್ಕೆ ಹಣ ಉಳಿತಾಯ ಜತೆಗೆ ಅರ್ಹ ಫಲಾನುಭವಿಗಳಿಗೆ ಮಾಸಾಶನ ತಲುಪಬೇಕು. ಈ ಹಿನ್ನೆಲೆಯಲ್ಲಿ ವಿಸ್ತೃತ ಸಮೀಕ್ಷೆ ನಡೆಸಿ ತಿಂಗಳೊಳಗೆ ವರದಿ ಸಲ್ಲಿಸುವಂತೆ ಎಲ್ಲ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.